ದಿಃ 17.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಶ್ರೀ. ಕೆ ಎಸ್ ಆರ್ ಪ್ರತಿವಾದಿಗಳ ಪರ ವಕೀಲರಿಂದಃ

ವಾದಿಗಳು ನಮ್ಮ ಮನೆಯ ಮೇಲೆ ವಾಸವಿದ್ದರು. ನನ್ನ ಮನೆ ವಿನಾಯಕ ನಗರದಲ್ಲಿರುತ್ತದೆ. ದಾವಾ ಆಸ್ತಿಯೂ ಪುಷ್ಪ ಮತ್ತು ಸೌಮ್ಯ ರವರ ಹೆಸರಿನಲ್ಲಿದೆ. ದಾವಾ ಆಸ್ತಿಯೂ ಇರುವ ಲೇಔಟ್ ನ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ನಂಬರ್ ನನಗೆ ಗೊತ್ತಿಲ್ಲ. ಸಾಕ್ಷಿಯು ಮಂದುವರೆದು ದಾವಾ ಆಸ್ತಿಯೂ ಕೋಟೆಯ ಹಿಂಬದಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಉತ್ತರ- ದಕ್ಷಿಣ ಅಳತೆ ನನಗೆ ಗೊತ್ತಿಲ್ಲ, ದಾವಾ ಆಸ್ತಿಯ ಈಶಾನ್ಯ-ನೈರುತ್ಯ, ವಾಯುವ್ಯ-ಆಗ್ನೇಯ ಅಳತೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಖಾತೆ ನಂಬರ್ ನನಗೆ ಗೊತಿಲ್ಲ. ಸಾಕ್ಷಿಯು ಮುಂದುವರೆದು ಜಾಗವೂ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳು ಬಂದು ಗಲಾಟೆ ಮಾಡಿದರು ಎಂದು ನಾನು ಹೇಳಿದ್ದು, ಪ್ರತಿವಾದಿಗಳು ಯಾವ ದಿನಾಂಕದಂದು ಬಂದು ಗಲಾಟೆ ಮಾಡಿದರು ಎಂಬುದನ್ನು ನಿಖರವಾಗಿ ನನಗೆ ಹೇಳಲು ಆಗುವುದಿಲ್ಲ. 3 ಪ್ರತಿವಾದಿಗಳಲ್ಲಿ ಒಬ್ಬರು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಇನ್ನೊಬ್ಬರು ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. 3 ನೇ ಪ್ರತಿವಾದಿಯ ಹೆಸರು ನನಗೆ ಗೊತ್ತಿಲ್ಲ. 3 ನೇ ಪ್ಷತಿವಾದಿಯನ್ನು ನಾನು ನೋಡಿರುವುದಿಲ್ಲ. ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ಪ್ರತಿವಾದಿಯೂ ಹಿರಿಯವರಾಗಿರುತ್ತಾರೆ ಹಾಗೂ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡುವ ಪ್ರತಿವಾದಿಯು ಕೊನೆಯ ಮಗನಾಗಿರುತ್ತಾರೆ.

ದಾವಾ ಆಸ್ತಿಯೂ ಯಾವ ಲೇಔಟ್ ನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಒಂದನೇ ವಾದಿಯ ತಮ್ಮನ ಹೆಸರು ಮಂಜುನಾಥ. ಸದರಿ ಮಂಜುನಾಥ

ರವರು ಯಾವ ಸೈಟಿನಲ್ಲಿ ಮನೆಯನ್ನು ಕಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಪುಷ್ಪ ರವರು ಒಬ್ಬರೇ ಹೂಡಿರುತ್ತಾರೆ. ಪುಷ್ಪ ರವರ ತಮ್ಮ ಮಂಜುನಾಥ ರವರು 30X40 ವಿಸ್ತೀರ್ಣದ ಸೈಟಿನಲ್ಲಿ ಮನೆಯನ್ನು ಕಟ್ಟಿರುತ್ತಾರೆ. ಮಂಜುನಾಥ ರವರ ಮನೆಯಲ್ಲಿ ಒಂದು ಬಾಗಿಲು ಪೂರ್ವದ ದಿಕ್ಕಿನಲ್ಲಿದೆ ಹಾಗೂ ಇನ್ನೊಂದು ಬಾಗಿಲು ದಕ್ಷಿಣ ದಿಕ್ಕಿನಲ್ಲಿದೆ. ಮಂಜುನಾಥ ರವರ ಮನೆಯ ಚೆಕ್ಕು ಬಂದಿ ಗೊತ್ತಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಅವರ ಮನೆಯ ಪಶ್ಚಿಮ ದಿಕ್ಕಿನ ಚೆಕ್ಕು ಬಂದಿ ಗೊತ್ತಿದೆ ಹಾಗೂ ಉಳಿದ ಚೆಕ್ಕು ಬಂದಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಗಳ ಸೈಟಿನಲ್ಲಿ ಒತ್ತುವರಿ ಮಾಡಿರುವ ಕಾರಣ 1 ಮತ್ತು 2 ನೇ ಪ್ರತಿವಾದಿಗಳು ಬಂದು ಗಲಾಟೆ ಮಾಡಿರುತ್ತಾರೆ. 1 ನೇ ವಾದಿಯು ಯಾವಾಗ ಸೈಟ್ ನ್ನು ಕೊಂಡುಕೊಂಡರು ಎಂಬ ಪ್ರಶ್ನೆಗೆ ಸಾಕ್ಷಿ ಮಂಜುನಾಥ ರವರು ಮನೆ ಕಟ್ಟಿದ 1-1 ½ ವರ್ಷಗಳ ನಂತರ ವಾದಿಯೂ ಸೈಟ್ ನ್ನು ಕೊಂಡುಕೊಂಡರು ಎಂದು ನುಡಿಯುತಾರೆ. ಸೈಟ್ ನ್ನು ಯಾವ ದಿನಾಂಕದಂದು ಕೊಂಡುಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸೈಟ್ ನ್ನು ಯಾರ ಕಡೆಯಿಂದ ಕೊಂಡುಕೂಂಡರು ಎಂಬ ಪ್ರಶ್ನೆಗೆ ಸಾಕ್ಷಿ ಸೈಟು ಮಾರಿದವರು ತುಮಕೂರಿನಲ್ಲಿ ಇದ್ದಾರೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಗಲಾಟೆ ಆಗಿದೆ ಎಂಬ ದಿನದಂದು ಸೈಟ್ ನ್ನು ಒಂದನೇ ವಾದಿ ಮತ್ತು ಅವರ ತಮ್ಮನಾದ ಮಂಜುನಾಥ ರವರು ಕ್ಲೀನ್ ಮಾಡುತ್ತಿದ್ದರು. ಅವರು ತಮ್ಮ ಕೈಗಳಿಂದ ಹಾಗೂ ಗುದ್ದಲಿಗಳಿಂದ ಗಿಡಗಳನ್ನು ತೆಗೆದು ಹಾಕುತ್ತಿದ್ದರು. ಗಲಾಟೆಯೂ ಸುಮಾರು ಬೆ.11.30 ರಿಂದ 12.00 ಸಮಯದಲ್ಲಿ ಆಗಿರುತ್ತದೆ. ವಾದಿಗಳು ಗಿಡಗಳನ್ನು ತೆಗೆದು ಹಾಕುತ್ತಿದ್ದರು. ವಾದಿಗಳು ಕಾಂಪೌಂಡ್ ಕಟ್ಟಲು ಟ್ರೆಂಚ್ ಗಳನ್ನು ಅಗೆಯುತ್ತಿರಲಿಲ್ಲ. ನನ್ನ ಮುಖ್ಯ ವಿಚಾರರಣಾ ಪ್ರಮಾಣ ಪತ್ರದಲ್ಲಿ ವಾದಿಗಳು ಕಾಂಪೌಂಡ್ ಟ್ರೆಂಚ್ ಅಗೆಯಲು ಹೋಗಿದ್ದರು ಎಂದು ಬರೆಸಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಗಲಾಟೆ ಆಗಿದೆ ಎಂಬ ಸಮಯದಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಬಂದಿದ್ದರು ಎಂದು ಬರೆಸಿರುತ್ತೇನೆ

ಹಾಗೂ 3 ನೇ ಪ್ರತಿವಾದಿ ಬಂದಿದ್ದರು ಎಂದು ಬರೆಸಿರುವುದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ಒಂದನೇ ವಾದಿಯ ಸೈಟಿನೊಳಗೆ ಬಂದಿದ್ದರು. ಸೈಟಿನೊಳಗೆ 3 ಜನರು ಒಂದೇ ದಿವಸ ಬರಲಿಲ್ಲ ಸಾಕ್ಷಿಯು ಮುಂದುವರೆದು ಮೊದಲು ಪೊಲೀಸ್ ಇಲಾಖೆಯಲ್ಲಿ ಇರುವವರು ಬಂದರು ನಂತರ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡುವವರು ಬಂದರು ಹಾಗೂ ನಂತರ ನಾನು ನನ್ನ ಗೆಳೆಯನೊಂದಿಗೆ ಕರೆಯ ಮೂಲಕ ಮಾತನಾಡುವಷ್ಟುರಲ್ಲಿ 3 ನೇ ಯವರು ಬಂದು ಹೋಗಿದ್ದರು ಎಂದು ನುಡಿಯುತ್ತಾರೆ.

ಒಂದನೇ ವಾದಿಯ ಹೆಸರಿನಲ್ಲಿರುವ ಕ್ರಯ ಪತ್ರವನ್ನು ನಾನು ನೋಡಿಲ್ಲ. ಕ್ರಯ ಪತ್ರದ ಅಂಶಗಳ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯ ಪಕ್ಕದಲ್ಲಿ ಪ್ರತಿವಾದಿಗಳ ಜಾಗ ಇದೆ ಎಂದು ನನಗೆ ಪ್ರತಿವಾದಿಗಳು ಹೇಳಿದರು. ನಗರ ಸಭೆಯವರು ದಾವಾ ಆಸ್ತಿಯ ಅಳತೆ ಮಾಡಲು ಬಂದಿದ್ದರು. ನಗರ ಸಭೆಯವರು ಅಳತೆ ಕಾರ್ಯ ಮಾಡುವಾಗ ನಾನು ಸ್ಥಳದಲ್ಲಿ ಇರಲಿಲ್ಲ. ಪ್ರತಿವಾದಿಗಳು ಟ್ರೆಂಚ್ ಗಳನ್ನು ಅಗೆದು ಕಾಂಪೌಂಡ್ ಕಟ್ಟಲು ಬಂದಿರಲಿಲ್ಲ.

ನನ್ನ ಪ್ರಮಾಣ ಪತ್ರದಲ್ಲಿರುವ ಪೂರ್ಣ ಅಂಶಗಳು ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಪ್ರಮಾಣ ಪತ್ರವನ್ನು , ಓದಿ ತಿಳಿದುಕೂಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರವೂ ಎಲ್ಲಿ ಟೈಪ್ ಮಾಡಲಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ನನ್ನ ಪ್ರಮಾಣ ಪತ್ರವನ್ನು ಓದುವ ಮೊದಲೇ ನನ್ನ ಪ್ರಮಾಣ ಪತ್ರವೂ ಟೈಪ್ ಆಗಿತ್ತು. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ, ನಾನು ಸೈಟ್ ನ್ನು ಮತ್ತು ಪ್ರತಿವಾದಿಗಳನ್ನು ನೋಡಿಲ್ಲ ಹಾಗೂ ವಾದಿಗಳಿಗೆ ಸಹಾಯ ಮಾಡಲು ನ್ಯಾಯಾಲಯದ ಮ್ಹುದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ತಮ್ಮ ಸೈಟಿನ ಅಳತೆಯನ್ನು ಮೀರಿ ಪ್ರತಿವಾದಿಗಳ ಸೈಟ್ ನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಪಕ್ಕದಲ್ಲಿರುವ ಕೋಟೆಯೂ ಹಳೆ ಊರು ಆಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಜಾಗದಲ್ಲಿ ಲೆಟ್ರಿನ್ ಮತ್ತು ಲೆಟ್ರಿನ್ ಫಿಟ್ ಇದ್ದವು ಎಂದರೆ ಗೊತ್ತಿಲ್ಲ.  ಪ್ರತಿವಾದಿಗಳ ಜಾಗದಲ್ಲಿದ್ದ ಲೆಟ್ರಿನ್ ಮತ್ತು ಲೆಟ್ರಿನ್ ಫಿಟ್ ನ್ನು ವಾದಿಗಳು ಅಕ್ರಮ ಪ್ರವೇಶ ಮಾಡಿ ಧ್ವಂಸ ಗೊಳಿಸಿರುತ್ತಾರೆ ಎಂದರೆ ಗೊತ್ತಿಲ್ಲ.  ಪ್ರತಿವಾದಿಗಳ ಜಾಗದ ಅಳತೆ ನನಗೆ ಗೊತ್ತಿಲ್ಲ.  ನನಗೆ ಈ ಕೇಸಿನ ವಿಚಾರಗಳು ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು)

ಮರು ವಿಚಾರಣೆಃ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ.

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು